ಚಿತ್ತಾಪುರದ ದಿಗ್ಗಾಂವ ರಸ್ತೆಯಲ್ಲಿನ ರೈಲ್ವೆ ಸೇತುವೆಯ ಪುನರ್ ನಿರ್ಮಾಣದ ಬಗ್ಗೆ

೬೬೦. ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ (ಚಿತ್ತಾಪುರ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೫-೮೬ರ ಆಯವ್ಯಯದಲ್ಲಿ ಚಿತ್ತಾಪುರ ದಿಗ್ಗಾಂವ ರಸ್ತೆಯಲ್ಲಿ ಬರುವ ರೈಲ್ವೆ ಸೇತುವೆಯನ್ನು ಅಗಲಗೊಳಿಸಿ ಪುನರ್ ನಿರ್ಮಿಸುವ ಕೆಲಸ ಸೇರಿಸಲಾಗಿದ್ದುದು ನಿಜವಲ್ಲವೆ,

(ಆ) ಹಾಗಿದ್ದಲ್ಲಿ ಈ ಕೆಲಸದ ಅಂದಾಜು ಪಟ್ಟಿ ಹಾಗೂ ನಕಾಶೆಯನ್ನೇನಾದರೂ ಇಲಾಖೆಯವರು ಸರ್ಕಾರಕ್ಕೆ ಸಲ್ಲಿಸಿದ್ದಾರೆಯೇ,

(ಇ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ಹೌದು.

(ಆ) ಮತ್ತು (ಇ) ರೈಲ್ವೆ ಇಲಾಖೆಯವರು ಈ ಕೆಲಸಕ್ಕೆ ೧೩.೧೨ ಲಕ್ಷ ರೂ.ಗಳಿಗೆ ಒಂದು ಅಂದಾಜು ಪಟ್ಟಿಯನ್ನು ತಯಾರಿಸಿ, ಕಳುಹಿಸಿಕೊಟ್ಟಿದ್ದರು ಈ ಅಂದಾಜಿನಲ್ಲಿ ಸೇತುವೆಯ ಕೆಳಗೆ ೪.೨೭ ಮೀಟರುಗಳು ಕ್ಲಿಯರೆನ್ಸ್ ಕೊಟ್ಟಿದ್ದರಿಂದ ಇದನ್ನು ಸ್ಟ್ಯಾಂಡರ್ಡ್ಸ್‌ನಂತೆ ೫.೫ ಮೀಟರುಗಳನ್ನು ಇಟ್ಟು ಮಾರ್ಪಡಿಸಿದ ಅಂದಾಜು ಮತ್ತು ನಕ್ಷೆಗಳನ್ನು ರೈಲ್ವೆಯವರಿಂದ ಪಡೆಯುವಂತೆ ಮುಖ್ಯ ಇಂಜಿನಿಯರ್‌ರವರಿಗೆ ತಿಳಿಸಲಾಗಿದೆ. ಪರಿಷ್ಕೃತ ಅಂದಾಜು ರೈಲ್ವೆಯವರಿಂದ ಬಂದ ನಂತರ ಹಣದ ಲಭ್ಯತೆಯನ್ನಾಧರಿಸಿ ಈ ವಿಷಯವನ್ನು ಪರಿಶೀಲಿಸಲಾಗುವುದು.

ರಾಜ್ಯದಲ್ಲಿರುವ ಶಾಲಾ ಕಟ್ಟಡಗಳ ಸ್ಥಿತಿ

೨೪೭. ಶ್ರೀಮತಿ ಮುಂಖ್ತಾರುನ್ನೀಸ ಬೇಗಂ (ನರಸಿಂಹರಾಜ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡಗಳು ಬಹಳ ಹೀನಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಶಾಲಾ ಕಟ್ಟಡಗಳಿಗೆ ಸರಿಯಾದ ರೀತಿಯಲ್ಲಿ ಶೌಚ ಗೃಹಗಳನ್ನು ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸರ್ಕಾರ ಈ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

(ಅ) ಬಂದಿದೆ

(ಆ) ಬಂದಿದೆ

(ಇ) ಆಯವ್ಯಯದಲ್ಲಿ ಒದಗಿ ಬರುವ ಹಣದ ಮಿತಿಯಲ್ಲಿ ಶಾಲಾ ಕಟ್ಟಡಗಳ ದುರಸ್ಥಿ ಹಾಗೂ ಶೌಚಾಲಯಗಳ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

ಅತಿ ಮಳೆಯಿಂದಾಗಿ ಬೆಳಗಾಂ ಜಿಲ್ಲೆಯಲ್ಲಿ ರೈತರಿಗೆ ಉಂಟಾಗಿರುವ ತೊಂದರೆ

೨೦೧. ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಡಿಸೆಂಬರ್ ೧೯೮೬ರಲ್ಲಿ ಅಕಸ್ಮಾತ್ ಅತಿ ಮಳೆಯಾಗಿ ಬೆಳಗಾಂ ಜಿಲ್ಲೆಯಲ್ಲಿ ರೈತರಿಗೆ ಹಾನಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಅ) ಹಾಗಿದ್ದಲ್ಲಿ, ಹಾನಿಗೀಡಾದ ಚಿಕ್ಕ ಹಿಡುವಳಿದಾರರಿಗೆ ದೊಡ್ಡ ಹಿಡುವಳಿದಾರರಿಗೆ ಏನಾದರೂ ಪರಿಹಾರ ಕೊಡಲಾಗುವುದೇ;

(ಇ) ಹಾಗಿಲ್ಲದಿದ್ದಲ್ಲಿ ಅವರುಗಳು ಪಡೆದಿರುವ ಸಾಲದಲ್ಲಿ ಅಥವಾ ಮತ್ತಾವುದಾದರೂ ರೂಪದಲ್ಲಿ ವಿನಾಯಿತಿ ಮಾಡಲಾಗುವುದೇ;

(ಈ) ಪ್ರತಿ ವರ್ಷ ಇಂತಹ ಹಾನಿಯನ್ನು ತಪ್ಪಿಸಲು ತುಂಬಾಕು ಬೆಳೆಗಾರರಿಗೆ ಏನಾದರೂ ಶಾಶ್ವತ ಪರಿಹಾರ ಯೋಚಿಸಲಾಗಿದೆಯೇ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮಂತ್ರಿ ತೋಟಗಾರಿಕೆ ರಾಜ್ಯ ಸಚಿವರು).—

(ಅ) ಹೌದು.

(ಆ) ಇಲ್ಲ,

(ಇ) ಸಧ್ಯಕ್ಕೆ ಈ ವಿಷಯ ಪರಿಶೀಲನೆಯಲ್ಲಿಲ್ಲ.

(ಈ) ಇಲ್ಲ.

ಚಿಕ್ಕ ಗಂರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ವಿವಿಧ ಭಾಷಾ ಮಾಧ್ಯಮದ ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಬಗ್ಗೆ

೧೨೪೨. ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ). —ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಯಾವ ಯಾವ ಭಾಷೆಯು ಮಾಧ್ಯಮಗಳಿವೆ;

(ಆ) ಆಯಾ ಭಾಷಾ ಮಾಧ್ಯಮಿಕ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು; ಹಾಗೂ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಂಖ್ಯೆ ಎಷ್ಟು ;

(ಇ) ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ಯಾವ ಯಾವ ಭಾಷೆಯು ಮಾಧ್ಯಮಗಳಿವೆ;

(ಈ) ಅಲ್ಲಿರುವ ಮಾಧ್ಯಮಿಕ ಶಾಲೆಗಳೆಷ್ಟು; ಹಾಗೂ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

(ಅ) ಕನ್ನಡ, ಇಂಗ್ಲೀಷ್, ಉರ್ದು, ತಮಿಳು, ತೆಲುಗು, ಮಲಯಾಳಂ, ಗುಜರಾತಿ ಹಾಗೂ ಮರಾಠಿ, ಹಿಂದಿ, ಮಾಧ್ಯಮಗಳ ಶಾಲೆಗಳು ಇದೆ.

(ಆ) ಪಟ್ಟಿಯನ್ನು ಲಗತ್ತಿಸಿದೆ.

(ಇ) ಕನ್ನಡ, ಇಂಗ್ಲೀಷ್, ಉರ್ದು, ತಮಿಳು, ತೆಲುಗು, ಮರಾಠಿ, ಹಿಂದಿ, ಮಾಧ್ಯಮದ

(ಈ) ಪಟ್ಟಿಯನ್ನು ಲಗತ್ತಿಸಿದೆ.